‘ಸುಳ್ಳು ಹೇಳ್ತಿಲ್ಲ ತಾನೆ?’

ಅವನ ಬದಲಾಗದ ಧ್ವನಿಯಿಂದ ಆತ ಆಕ್ರಮಣಕ್ಕೊಳಗಾದ ವ್ಯಕ್ತಿಯಲ್ಲವೆನಿಸಿದರೂ ಅವಳಿಗೆ ವಿಶ್ವದ ಎಂಟನೆ ಅದ್ಭುತ ಕಂಡಂತಾಗಿತ್ತು.

‘ಮೇನಕಾ, ನಿನ್ನತ್ರ ನಾನ್ಯಾಕೆ ಸುಳ್ಳು ಹೇಳ್ಲಿ? ನಾನು ಸರಿಯಾದ ಸಮಯಕ್ಕೆ ಹೊರಟಿದ್ದೆ. ನಿನಗೆ ರಹಸ್ಯ ತೋರಿಸ್ತೀನೀಂತ ಹೇಳಿದ್ದೆ. ಅದಕ್ಕೆ ಅದನ್ನ...’

‘ಸುಳ್ಳು ಹೇಳ್ಬೇಡ ಕಿರಣ. ನಾನು ನಿಂಗೋಸ್ಕರ ಇಲ್ಲಿಯವರೆಗೂ ಫಾರ್ಮ್ ಹೌಸ್‌ನಲ್ಲಿ ಕಾಯ್ತಾ ಇದ್ದೆ. ಕೊನೆಗೆ ನೀನು ಬಂದೇಂತ ನಾನು ಖುಷಿ ಪಡೋವಷ್ಟರಲ್ಲಿ ಯಾರದೋ ನರಳಾಟ, ಚೀರಾಟ, ಹೋರಾಟದ ದನಿ ಕೇಳಿಸ್ತು. ಅಲ್ಲಿ ಹೋಗಿ ನೋಡಿದೆ. ನೀನೇ ನೀನೇ ಬಲ್ಲೆಯ ಒಳಗೆ ಸಿಕ್ಕಾಕೊಂಡು ಎದೆ ಮೇಲೆ ಕೈಯಿಟ್ಕೊಂಡು ನರಳ್ತಾ ಇದ್ದೆ. ಅದಕ್ಕೆ ರಾಮಸ್ವಾಮಿಯನ್ನು ಕರೆದುಕೊಂಡು ಬರೋದಿಕ್ಕೆ ಇಲ್ಲಿಗೆ ಬಂದೆ’

ಕಿರಣ ಅದ್ಭುತ ಕಂಡಂತೆ ಆ ಕತ್ತಲೆಯಲ್ಲಿಯೂ ಅವಳ ಸಾಹಸವನ್ನು ಮೆಚ್ಚಿದಂತೆ ಅವಳ ಮಾತುಗಳನ್ನು ಕೇಳಿ ಆಶ್ಚರ್ಯದಿಂದ ಕಣ್ಣುಗಳನ್ನು ಅಗಲಕ್ಕೆ ತೆರೆದು ಉದ್ಗಾರ ತೆಗೆದ.

* * *

ತಲ್ಲಣಕ್ಕೊಳಗಾದ ಮೇನಕಾಳ ಕರಗಳನ್ನು ಮೆಲ್ಲಗೆ ಒತ್ತಿದ ಕಿರಣ ಅವಳನ್ನು ಸಮಾಧಾನ ಮಾಡಲು ಪ್ರಯತ್ನಿಸಿದ. ಅವಳ ಕಣ್ಣುಗಳಲ್ಲಿ ಅಸಮಾಧಾನದ ನೆರಳನ್ನು ಮರೆಯಲಾಗಲಿಲ್ಲ. ಕಿರಣನ ಹಿಡಿತಕ್ಕೆ ಸ್ಪಂದಿಸಿದಂತೆ ಅವನ ತೋಳನ್ನು ಬಳಸಿ ಕೇಳಿದಳು.

‘ಕಿರಣ, ನಿನ್ನ ಬೆಳಕಿನಲ್ಲಿ ನೋಡೋವರೆಗೂ ನನಗೆ ಸಮಾಧಾನವಿಲ್ಲ. ಬಾ ಮನೆಗೆ ಹೋಗೋಣ. ರಾಮಸ್ವಾಮಿ, ನೀನು ಫಾರ್ಮ್ ಹೌಸ್‌ಗೆ ಬೀಗ ಜಡಿದು ಬಾ’ ಕಿರಣನ ಕೈಗಳನ್ನು ಹಿಡಿದು ಬಂಗಲೆಯತ್ತ ನಡೆದಳು. ಕಿರಣ ಅವಳನ್ನು ಸಮಾಧಾನಿಸಲು ಪ್ರಯತ್ನಿಸಿದ.

‘ಮೇನಕಾ, ನಂಗೇನೂ ಆಗಿಲ್ಲ. ನೀನು ಅನಗತ್ಯ ನನ್ನ ಬಗ್ಗೆ ಭಯ ಪಡ್ತಿದ್ದೀಯಾ. ಆತುರ ಪಡ್ಬೇಡ. ಈ ಹೊತ್ತಿನಲ್ಲಿ ನಾನು ಬಂಗಲೆಗೆ ಬಂದರೆ ಅಪಾರ್ಥವಾಗುತ್ತೆ’ ಅವಳ ಹಿಡಿತದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ.

ಮೇನಕಾ ಕಿರಣನ ಮಾತಿಗೆ ಜಗ್ಗಲಿಲ್ಲ.

‘ಮನೆಯಲ್ಲಿ ಯಾರೂ ಇಲ್ಲ. ಡ್ಯಾಡಿ ಇನ್ನೂ ಹೈದರಾಬಾದ್‌ನಿಂದ ಹಿಂತಿರುಗಿಲ್ಲ. ನನ್ನ ಮಾತು ಕೇಳೋದಿಲ್ಲ ನೀನು?’ ಬಲವಂತದಿಂದ ಎಳೆದಳು.

ಅದಾಗಲೆ ರಾಮಸ್ವಾಮಿ ಟಾರ್ಚ್ ಬೆಳಗುತ್ತಾ ಫಾರ್ಮ್ ಹೌಸ್‌ನತ್ತ ನಡೆದಿದ್ದ. ಕಿರಣ ಮೇನಕಾಳ ಒತ್ತಾಯಕ್ಕೆ ಮಣಿಯಲೇಬೇಕಾಯಿತು.

‘ಸರಿ, ಬರ್ತೀನಿ, ಇರು. ಬೈಕ್ ತರ್ತೀನಿ’ ಬೈಕ್‌ನತ್ತ ಅವಳ ಜೊತೆಗೆ ಹೆಜ್ಜೆ ಹಾಕಿದ. ಬೈಕ್ ಚಾಲನೆಗೆ ತರುತ್ತಲೇ ಅವಳು ಏರಿ ಕುಳಿತಳು. ಬೈಕ್ ಬಂಗಲೆಯ ತೆರೆದ ಗೇಟಿನೊಳಗೆ ಹರಿಯಿತು. ವೆರಾಂಡದ ಬೆಳಕಿನಲ್ಲಿ ಬೈಕ್ ನಿಲ್ಲಿಸಿ ಇಬ್ಬರೂ ಒಳಗೆ ನಡೆದರು.

‘ಕಿರಣ, ಮೆತ್ತಗೆ ಮಾತಾಡು ಇಲ್ಲಾಂದ್ರೆ ನಿನ್ನ ಹಿತೈಷಿ ಮಹಡಿಯಿಂದ ಇಳಿದು ಬಂದ್ರೆ ಕಷ್ಟ. ರಾತ್ರಿಯಲ್ಲೇ ಶಿವರಾತ್ರಿಯಾಗೋ ಸಾಧ್ಯತೆಯಿದೆ’ ಕಾಶಮ್ಮನ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಹೇಳಿ ಕಿರಣನನ್ನು ನೋಡುವ ಸಲುವಾಗಿ ಹಜಾರದ ಎಲ್ಲಾ ದೀಪಗಳನ್ನು ಬೆಳಗಿಸಿದಳು.

ಬೆಳಗಿದ ಎಲ್ಲಾ ದೀಪಗಳ ಬೆಳಕು ಸೂರ್ಯನ ಬೆಳಕಿಗಿಂತಲೂ ಪ್ರಖರವಾದಾಗ ಅಡುಗೆಯ ಆಳು ಮೆಲ್ಲಗೆ ಹೊರಗೆ ಇಣುಕು ಹಾಕಿದ. ಮೇನಕಾಳ ಜೊತೆಗೆ ಕಿರಣನನ್ನು ನೋಡುತ್ತಲೇ ಆಮೆ ಚಿಪ್ಪಿನೊಳಗೆ ಸೇರಿಕೊಳ್ಳುವಂತೆ ಅಡುಗೆ ಮನೆಯೊಳಗೆ ಸೇರಿಕೊಂಡು, ಬಾಗಿಲನ್ನು ಶಬ್ದವಾಗದಂತೆ ಮುಚ್ಚಿದ.

ಅದೇ ಸಮಯಕ್ಕೆ ಕಾಶಮ್ಮನನ್ನು ನೋಡಿಕೊಳ್ಳುವ ಹೆಂಗಸು ಮೆಟ್ಟಿಲಿಳಿದು ಬಂದು ಹಜಾರದತ್ತ ನೋಟ ಹರಿಸಿದಳು. ಕಿರಣನ ಕಣ್ಣುಗಳು ಆ ನಿಶಬ್ದದಲ್ಲೂ ಆಕೆಯ ಹೆಜ್ಜೆ ಸಪ್ಪಳವನ್ನು ಕೇಳಿ ಅತ್ತ ತಿರುಗಿದವು. ಕಿರಣನ ಪರಿಚಯವಿದ್ದ ಆಕೆ ಮುಗುಳ್ನಕ್ಕಳು.

‘ಚಿಕ್ಕಮ್ಮೋರು ಹೇಗಿದ್ದಾರೆ? ನಾನು ಬಂದಿರೋ ವಿಷಯ ತಿಳಿಸ್ಬೇಡ’ ತಗ್ಗಿದ ದನಿಯಲ್ಲಿ ಕೆಲಸದಾಕೆಗೆ ಹೇಳಿದಾಗ ಮೇನಕಾಳ ದೃಷ್ಟಿ ಅವಳತ್ತ ಹರಿಯಿತು. ಇಷ್ಟವಿಲ್ಲದವರಂತೆ ಮುಖ ಕಿವುಚಿದಳು.

‘ಕಿರಣ, ನಿಂಗೇನೂ ಆಗಿಲ್ಲ ತಾನೆ?’ ಆ ಹೆಂಗಸು ಮೆಟ್ಟಲೇರಿ ಹೋದ ಮೇಲೆ ಪ್ರಶ್ನಿಸಿದಳು.



## ಇಲ್ಲಿಯವರೆಗೆ

ಮೇನಕಾಳಿಗೆ ಇನ್ಸ್‌ಪೆಕ್ಟರ್ ರಾಜಧಾನಿಯ ಮೇಲೆ ತೀವ್ರ ಅಸಮಾಧಾನವಿತ್ತು. ಆತ ‘ಮೇನಕಾ ಫಾರ್ಮ್’ ಹೌಸ್‌ಗೆ ಬರುವಾಗ ಯುನಿಫಾರಂನಲ್ಲಿ ಇಲ್ಲದೇ ಇದ್ದಿದ್ದರಿಂದ ಆತನನ್ನು ಮೇನಕಾ ಗುರುತಿಸಿರಲಿಲ್ಲ. ಒಂದುವೇಳೆ ಗುರುತಿಸಿದ್ದರೆ ಅಲ್ಲಿ ನಿಲ್ಲದೆ ಸೀದಾ ನಡೆಯುತ್ತಿದ್ದಳು ಮೇನಕಾ. ‘ನೀವು ಅಪಾಯದಲ್ಲಿರುವಿರೆಂದು ಇಲ್ಲಿಗೆ ಬಂದೆ. ಕೋರ್ಟ್‌ಗೆ ಹೋಗಬೇಕಿದೆ. ಏನಾದರೂ ತೊಂದರೆ ಇದ್ದರೆ ಪೊಲೀಸ್ ಸ್ಟೇಷನ್‌ಗೆ ಬನ್ನಿ’ ಎಂದು ಹೇಳಿ ರಾಜಧಾನಿ ಕಾರು ಹತ್ತಿ ಹೋಗುತ್ತಾನೆ. ಮಧ್ಯಾಹ್ನ ಕಳೆದ ಮೇಲೆ ಇನ್ಸ್‌ಪೆಕ್ಟರ್‌ನ್ನು ಭೇಟಿ ಆಗಬೇಕು ಎಂದು ಬಯಸಿ ಸ್ಟೇಷನ್‌ಗೆ ಹೋಗುತ್ತಾಳೆ ಮೇನಕಾ. ಆದರೆ ಇನ್ಸ್‌ಪೆಕ್ಟರ್ ಅನ್ನು ನೇರವಾಗಿ ಭೇಟಿಯಾಗಲು ಬಿಡದೆ ಹಲವು ಪ್ರಶ್ನೆಗಳನ್ನು ಕೇಳುತ್ತಾನೆ ಪಿಸಿ ಸಾರಂಗ. ಬಳಿಕ ರಾಜಧಾನಿ ಬಳಿ ಮೇನಕಾ ಬಂದಿರುವ ವಿಷಯ ಹೇಳುತ್ತಾನೆ. ಯಾವುದೋ ಫೈಲ್‌ನಲ್ಲಿ ಮುಳುಗಿದ್ದವನು ಆಕೆಯನ್ನು ಒಳಗೆ ಕಳಿಸುವಂತೆ ಸಾರಂಗನಿಗೆ ಹೇಳುತ್ತಾನೆ. ಯಾವುದೋ ಆತಂಕದಲ್ಲಿರುವಂತೆ ಕಂಡ ಮೇನಕಾಳ ಬಳಿ ಇನ್ಸ್‌ಪೆಕ್ಟರ್ ಏನೆಂದು ಕೇಳಿದಾಗ ‘ಯಾವುದೋ ಅನಾಮಧೇಯ ಪತ್ರ ಬಂದಿತ್ತು’ ಎಂದು ಹೇಳುತ್ತಾಳೆ. ಜತೆಗೆ ಆ ಪತ್ರದಲ್ಲಿ ನಿರ್ದಿಷ್ಟ ಜಾಗಕ್ಕೆ ಆಕೆಯನ್ನು ಬರುವುದಕ್ಕೆ ಹೇಳಿರುವುದಲ್ಲದೆ ಮೂರು ಲಕ್ಷ ರೂಪಾಯಿ ಡಿಮಾಂಡ್ ಅನ್ನು ಇಟ್ಟಿರುವುದನ್ನು ತಿಳಿಸುತ್ತಾಳೆ. ಹಾಗಾದರೆ ಲಹರಿ ಬದುಕಿರಬೇಕು, ಅದಕ್ಕಾಗಿಯೇ ಈ ಸಂಚು ಎಂಬ ಸೂಚನೆ ರಾಜಧಾನಿಗೆ ಸಿಕ್ಕಂತಾಗುತ್ತದೆ.

‘ಇಲ್ಲ, ನಂಗೇನೂ ಆಗಿಲ್ಲಾಂತ ಸಾರಿ ಹೇಳ್ತಿದ್ದೀನಿ. ನಿಜವಾಗಿ ಅಲ್ಲಿ ನಡೆದಿರೋದು ಏನು ಅನ್ನೋದನ್ನ ನಂಗೆ ನೀನು ಹೇಳ್ಬೇಕು. ಸರಿನಾ?’

‘ಇತ್ತ ಕಡೆ ಬಾ, ಕೂತ್ಕೋ. ರಾಮಸ್ವಾಮಿ ಬರೋವರ್ಗೂ ನೀನು ಇಲ್ಲಿಯೇ ಇರ್ಬೇಕು’ ಅವನನ್ನು ಒತ್ತಾಯಿಸಿದಳು. ತಕ್ಷಣವೇ ಕಿರಣನಿಗೆ ಅವಳು ಹೇಳಿದ ಘಟನೆ ನೆನಪಿಗೆ ಬಂತು.

‘ಮೇನಕಾ, ನೀನು ಬಲ್ಲೆಯಲ್ಲಿ ಬಿದ್ದೀರೋ ವ್ಯಕ್ತಿಯನ್ನು ನೋಡಿದ್ದಿ. ಆ ವ್ಯಕ್ತಿ ನನ್ನ ಹಾಗೆ ಇದ್ದ ಅಂದೆ. ನಾನೀಗ ಇಲ್ಲಿದ್ದೀನಿ. ಈಗ ನಿಂಗೆ ಸ್ಪಷ್ಟವಾಗಿರಬಹುದು ಅಲ್ಲಿ ಬಿದ್ದಿದ್ದ ವ್ಯಕ್ತಿ ನಾನಲ್ಲ. ಹಾಗಾದರೆ ಅಲ್ಲಿ ಬಿದ್ದಿದ್ದ ವ್ಯಕ್ತಿ ಯಾರು?’

ಆತಂಕದ ಕ್ಷಣಗಳಿಂದ ಹೊರಗೆ ಬಂದ ಮೇನಕಾ ಎಚ್ಚೆತ್ತುಕೊಂಡಳು.

‘ಹೌದು ಕಿರಣ, ಅಲ್ಲಿ ನಿನ್ನ ಹಾಗೇನೆ ಒಬ್ಬ ವ್ಯಕ್ತಿ ನರಳ್ತಾ ಬಿದ್ದಿದ್ದ. ಅವನು ಯಾರೂಂತ ತಿಳ್ಕೊಳ್ಬೇಕು’ ಕಿರಣ ಎದ್ದು ನಿಂತ.

‘ಸರಿ, ಅವ್ನು ಯಾರೂಂತ ಗುರುತು ಹಿಡಿಬೇಕು. ಹೊರಡು ಅವನಿಗೆ ಅಗತ್ಯವಾಗಿ ಸಹಾಯ ಮಾಡ್ಬೇಕು. ಅಪಾಯದಿಂದ ಅವನನ್ನ ಪಾರು ಮಾಡ್ಬೇಕು’ ಆತುರ ತೋರಿಸಿದ ಕಿರಣ. ಮೇನಕಾ ಆ ಕ್ಷಣಕ್ಕೆ ಒಪ್ಪಿಕೊಳ್ಳದೆ ಅವನನ್ನು ದಿಟ್ಟಿಸಿದಳು.

‘ರಾಮಸ್ವಾಮಿ ಬರೋವರ್ಗೂ ಕಾಯೋಣ. ಅವ್ನು ಏನು ಹೇಳ್ತಾನೋ ನೋಡೋಣ. ಇನ್ನೂ ಆ ವ್ಯಕ್ತಿಯ ದೇಹ ಅಲ್ಲೇ ಬಿದ್ದಿದ್ರೆ ನಾವಿಬ್ರೂ ನೋಡ್ಕೊಂಡು ಬರೋಣ’ ಆತುರ ಪಡಿಸಿದವನನ್ನು ತಡೆದಳು.

ಕಾಕುಟ್ಟ ಅಸಾಮಾನ್ಯ ವ್ಯಕ್ತಿ! ಕಿರಣ ತನ್ನ ಜೊತೆಗೆ ಸಲುಗೆಯಿಂದಿರುವುದಕ್ಕೆ ಈ ರೀತಿಯ ಅಪಾಯ ತಂದೊಡ್ಡಿದ್ದಾನೆ! ಕಿರಣನ ಮೇಲೆ ಆಕ್ರಮಣ ನಡೆಸಿ